# ಪತಿಧರ್ಮ

ಪೆಣ್ಣಲ್ಲವೆ ನಮ್ಮನೆಲ್ಲ ಪಡೆದ ತಾಯಿ
ಪೆಣ್ಣಲ್ಲವೆ ಪೊರೆದವಳು

ಈ ಸಾಲುಗಳನ್ನು ಹೆಣ್ಣಿನ ಘನತೆಯನ್ನು ಹೇಳುವ ಸಂದರ್ಭದಲ್ಲಿ ಬಹುತೇಕರು ಬಳಸುತ್ತಾರೆ. 'ಹದಿಬದೆಯ ಧರ್ಮ'ವನ್ನು ಆ ಕಾಲಕ್ಕೆ ಪುರುಷ ಸೂಕ್ತಗಳು ನಿರ್ದೇಶಿಸಿದ ಹಿನ್ನೆಲೆಯಲ್ಲಿ ಸಂಚಿ ಹೊನ್ನಮ್ಮ ಬರೆದಳು. ಕಾಲಕ್ಕೆ ಒಂದು ಕಟ್ಟಲೆಯಿರುತ್ತದೆ. ಅದು ಆಳುವವರನ್ನು ಅನುಸರಿಸಿ ಜಾರಿಗೆ ಬಂದು ನಿಯಮವಾಗುತ್ತದೆ. ಈ ಸ್ತ್ರೀ ಸಂಬಂಧಿತ ಕಟ್ಟಲೆಗಳನ್ನು ಹೊನ್ನಮ್ಮ ಕಾವ್ಯರೂಪದಲ್ಲಿ ಹಿಡಿದಿಟ್ಟಿದ್ದಾಳೆ. ಹೆಣ್ಣಿಗೆ ಸ್ವತಂತ್ರ ಆಲೋಚನೆಗಳಿಲ್ಲದ, ವ್ಯಕ್ತಿತ್ವವಿಲ್ಲದ, ಗೃಹಬಂಧಿಯಾಗಿದ್ದ ಸಂದರ್ಭದಲ್ಲಿ ಹುಟ್ಟಿದ ಕಾವ್ಯವಿದು.

12ನೆಯ ಶತಮಾನದ ಅಕ್ಕಮಹಾದೇವಿಗೂ 16ನೆಯ ಶತಮಾನದ ಹೊನ್ನಮ್ಮನಿಗೂ ಅಗಾಧ ವ್ಯತ್ಯಾಸವಿದೆ. 12ನೆಯ ಶತಮಾನದಲ್ಲಿ ಬಸವಾದಿ ಪ್ರಥಮರು ಹೆಣ್ಣಿಗೆ ಉದಾತ್ತ ಸ್ಥಾನವನ್ನು ಕಲ್ಪಿಸಿದರು. ಈ ಸಂದರ್ಭದಲ್ಲಿ ಬರೆದ ಎಲ್ಲಾ ವಚನಕಾರ್ತಿಯರು ತಮಗೆ ಏನನ್ನು ಬರೆಯಬೇಕೆನಿಸಿತೋ ಅದನ್ನು ಮುಕ್ತವಾಗಿ ಬರೆದರು. ಇಲ್ಲಿಯೂ ಕೂಡ ಕಾಯಕನಿಷ್ಠೆ, ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವನಿಗೆ ಎಂಬ ಮಾದರಿಗಳು ನಿರ್ಮಾಣಗೊಂಡಿದ್ದವು. ವಚನಕಾರರ ಸಮಾನತೆಯ ಪರಿಕಲ್ಪನೆ ಗಾಳಿ ಬೀಸುತ್ತಿದ್ದ ಕಾಲಘಟ್ಟದ ಕಾವ್ಯವದಾಗಿತ್ತು.

ಬಡತನದ ಹಿನ್ನೆಲೆಯ ಹೊನ್ನಮ್ಮ ಸಂಬಂಧಿಕರ ಮನೆಯಲ್ಲಿ ಕಷ್ಟದಿಂದ ಬಾಲ್ಯವನ್ನು ಕಳೆಯುತ್ತಿದ್ದವಳು. ಒಂದು ದಿನ ಅಚಾನಕ್ಕಾಗಿ ಮೈಸೂರು ದೊರೆಗಳಾದ ಚಿಕ್ಕದೇವರಾಜ ಒಡೆಯರ್ ಅವರ ಪಟ್ಟದರಸಿ ದೇವಾಜಮ್ಮಣ್ಣಿಯವರ ಕಣ್ಣಿಗೆ ಬೀಳುತ್ತಾಳೆ. ಅರಸಿ ಆಕೆಯನ್ನು ತನ್ನ ರಾಣಿವಾಸದಲ್ಲಿ ಸೇರಿಸಿಕೊಳ್ಳುತ್ತಾಳೆ.

ಅಷ್ಟರಲ್ಲಾಗಲೇ ದೊರೆಗಳ ಆಸ್ಥಾನದಲ್ಲಿ ತಿರುಮಲಾರ್ಯ, ಸಿಂಗರಾರ್ಯ, ಶೃಂಗಾರಮ್ಮ, ಚಿಕ್ಕುಪಧ್ಯಾಯರಂತಹ ಗಣ್ಯಕವಿಗಳು ಹೆಸರು ಮಾಡಿದ್ದರು. ತಮ್ಮ ಊಳಿಗದಲ್ಲಿದ್ದ ಹೊನ್ನಮ್ಮನ ಕಲಿಯುವ ಆಸಕ್ತಿಯನ್ನು ಕಂಡ ಅರಸಿ ಅದನ್ನು ಅರಸನಿಗೆ ತಿಳಿಸುತ್ತಾಳೆ. ಹೊನ್ನಮ್ಮನ ಉತ್ಸಾಹಕ್ಕೆ ನೀರೆರೆಯುವಂತೆ ಆಕೆಯನ್ನು ಸಿಂಗರಾರ್ಯರ ಶಿಷ್ಯಳನ್ನಾಗಿ ಮಾಡಲಾಗುತ್ತದೆ. ಸಿಂಗರಾರ್ಯ ಕನ್ನಡದ ಮೊದಲ ನಾಟಕ 'ಮಿತ್ರವಿಂದಾ ಗೋವಿಂದ'ದ ಕರ್ತೃ. ಹೊನ್ನಮ್ಮನ ಆಸಕ್ತಿಗೆ ಅನುಗುಣವಾಗಿ ಗುರುವಾದ ಅವರು – ಕನ್ನಡ, ಸಂಸ್ಕೃತ, ಧರ್ಮಶಾಸ್ತ್ರ, ಕಾವ್ಯಪುರಾಣಗಳನ್ನು ಕಲಿಸುತ್ತಾರೆ. ಶಿಷ್ಯಳ ಕಲಿಕೆಯನ್ನು, ಆ ಕಲಿಕೆಯ ಮೂಲಕ ಗಳಿಸಿದ ಪಾಂಡಿತ್ಯವನ್ನು ಮೆಚ್ಚಿಕೊಂಡ ಗುರು, ಆ ವಿಷಯವನ್ನು ಅರಸನಿಗೆ ತಿಳಿಸುತ್ತಾನೆ. ಅರಸ, ಅರಸಿಯರಿಂದ ಹೊನ್ನಮ್ಮನಿಗೆ ಕಾವ್ಯವೊಂದನ್ನು ಬರೆಯಬೇಕೆಂಬ ಪ್ರೋತ್ಸಾಹ ಸಿಗುತ್ತದೆ. 'ಅರಸನೇ ನಿನ್ನಡಿಯೊಳಿಗ ಹಾಗೂ ಅರಸಿಯ ಒಲುಮೆ ನನ್ನ ಸಕಲ ಸಾಧನೆಗೆ ಸಿದ್ಧಿಯನ್ನು ಒದಗಿಸುತ್ತವೆ' ಎಂದು ಹೊನ್ನಮ್ಮ ಕಾವ್ಯದ ಮೂಲಕ ಕೃತಜ್ಞತೆಯನ್ನು ಸಲ್ಲಿಸಿದ್ದಾಳೆ. 'ಹೆಣ್ಣುಮಕ್ಕಳಿಗೆ ಉಪಯುಕ್ತವಾಗುವಂಥ ವಿಷಯಗಳನ್ನು ಕಾವ್ಯರೂಪದಲ್ಲಿ ಬರೆ' ಎಂದು ಗುರುವಿನ ನಿರೂಪವೂ ದೊರೆಯುತ್ತದೆ. ಹೊನ್ನಮ್ಮ 'ತಾನು ಸ್ತ್ರೀಗೀತ ಅಥವಾ ಪತಿವ್ರತಾಗೀತವನ್ನು ಹಾಡುತ್ತೇನೆ. ಇದನ್ನು ಕೇಳಿದ ಸಹೋದರಿಯರಿಗೆ ಇದರಿಂದ ಇಹವೂ, ಪರವೂ ಪ್ರಾಪ್ತವಾಗುತ್ತದೆ' ಎಂದು ಹೇಳಿ ಅದರಂತೆಯೇ ಕಾವ್ಯ ರಚಿಸುತ್ತಾಳೆ.

ಅವಳೇ ಹೇಳಿಕೊಂಡಿರುವಂತೆ 'ಎಲ್ಲರಿಂದ ಕೇಳಿದುದನೆ ಕುಂದುಕೊರತೆಗಳಿಲ್ಲದಂತೆ ಎಚ್ಚರದಿಂದ ಎಲ್ಲರೂ ತಿಳಿಯುವಂತೆ ನನ್ನ ಎಳಸು ಮಾತುಗಳಿಂದ ಸೊಗಸಾಗಿ ನುಡಿಯುತ್ತೇನೆ' ಎಂದು ತನ್ನ ಕಾವ್ಯವನ್ನು ರಚಿಸಿದ್ದಾಳೆ. ಹೀಗೆ 'ಹದಿಬದೆಯ ಧರ್ಮ'ದ ಹಿನ್ನೆಲೆಯಲ್ಲಿ ಹೊನ್ನಮ್ಮಳನ್ನು ಪೋಷಿಸಿದ ಅರಸ, ಅರಸಿ, ಗುರುಗಳು ಇಂತಹುದೇ ಕಾವ್ಯವನ್ನು ನೀನು ಬರೆಯಬೇಕೆಂಬ ಹಂಬಲ ತೋರಿಸುತ್ತಾರೆ. ಅರಮನೆಯ ಸಂಚಿಯ ಊಳಿಗದಲ್ಲಿದ್ದು ಹೊಸದೇನನ್ನು ಹೇಳುವ ಕಾಲವಲ್ಲವಾದ್ದರಿಂದ ಪಾತಿವ್ರತ್ಯ ಕುರಿತಾದ ಕಾವ್ಯವನ್ನು ಆಕೆ ಬರೆಯಬೇಕಾಯಿತು.

ಒಡೆಯ, ಒಡತಿ ಹಾಗೂ ಗುರುಗಳ ಕಾರುಣ್ಯದಿಂದ ಕೃತಜ್ಞತಾಪೂರ್ವಕವಾಗಿ ಬರೆದ ಕಾವ್ಯದಲ್ಲಿ ಹೆಚ್ಚಿಗೆ ಏನನ್ನು ನಿರೀಕ್ಷಿಸಲು ಸಾಧ್ಯ. ಒಂದು ಕಾಲಘಟ್ಟದಲ್ಲಿ, ಪುರುಷನಿರ್ಮಿತ ಚೌಕಟ್ಟಿನಲ್ಲಿ, ಪುರುಷ ನಿರೀಕ್ಷೆಗೆ ಅನುಸಾರ ಬರೆದ ಕಾವ್ಯದಲ್ಲಿ ನಾವು ಹೊಸದನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಹಾಗೆಂದು ನಾವು ಹೊನ್ನಮ್ಮನನ್ನು ಸ್ತ್ರೀ ವಿರೋಧಿ ಕಾವ್ಯ ಬರೆದಳೆಂದು ದೂಷಿಸುವಂತಿಲ್ಲ. ಬರೆಸಲಾಯಿತು ಎಂಬ ಸಂಗತಿಯನ್ನು ನಾವು ನೆನಪಿನಲ್ಲಿಡಬೇಕಾಗುತ್ತದೆ. ಹೊಸದಾಗಿ ಮದುವೆಯಾದವಳು ತನ್ನ ಗಂಡನ ಮನೆಯಲ್ಲಿ ನಿಧಾನವಾಗಿ ತನ್ನ ವಿಧೇಯತೆ, ಕೆಲಸ ಕಾರ್ಯಗಳಲ್ಲಿನ ಪರಿಣತಿಯಿಂದ ಹೇಗೆ ಎಲ್ಲರ ಮನಸ್ಸನ್ನು ಗೆಲ್ಲಬೇಕು, ಹೇಗೆ ಸೊಸೆಯಾಗಿ ಮನೆಯನ್ನು ನಿರ್ವಹಿಸಬೇಕು ಎಂಬ ಬುದ್ಧಿಮಾತುಗಳು ಪ್ರಧಾನವಾಗಿ ತೋರುತ್ತವೆ.

ಹೊನ್ನಮ್ಮ ಭಿನ್ನವಾಗುವುದು ಗಂಡನಾದವನು ತನ್ನನ್ನೇ ನಂಬಿ ಬಂದ ಹೆಂಡತಿಯನ್ನು ಹೇಗೆ ನಡೆಸಿಕೊಳ್ಳಬೇಕೆಂಬ ಬುದ್ಧಿಮಾತುಗಳನ್ನು ಹೇಳುವುದರ ಮೂಲಕ. ಆಕೆ ನಿರೀಕ್ಷಿಸುವುದು ಗಂಡನ ಸ್ನೇಹವನ್ನು ಮಾತ್ರ. ಅವನು ಸ್ನೇಹಿತನಾಗಿ ಅವಳಿಗೆ ಸ್ಪಂದಿಸಬೇಕು. ದೌರ್ಜನ್ಯ ನಡೆಸಬಾರದು ಎಂಬುದನ್ನು ಬಹಳ ಸ್ಪಷ್ಟವಾಗಿಯೇ ಅವಳು ಹೇಳುತ್ತಾಳೆ.

'ಸೊದೆಯುಂಡು ಸೊರ್ಕುವ ಜೊನ್ನವಕ್ಕಿಗೆ ಬಿಸುಗದಿರನೂಡುವ ಗೈಮೆಯಂತೆ, ಮಳೆಗೆ ಬಾಯ್ದೆರೆದ ಚಾದಗೆಯೊಳು ಬರಸಿಡಿಲು ಎರಗಿದಂತೆ, ಉಗುರೊಳು ಬಾಜಿಪ ವೀಣೆಗೆ ಒನಕೆಗೊಂಬ ತೆರನಂತೆ'. ಈ ಮಾತುಗಳು ಅವನು ಏನನ್ನು ಮಾಡಬಾರದು ಎಂಬುದನ್ನು ಹೇಳುವಂತಿವೆ. ಒಂದು ವೇಳೆ ಅವಳೊಂದಿಗೆ ಅವನು ಉಳಿದವರಂತೆ ಕಲ್ಲುಮನಸ್ಸಿನಿಂದ ನಡೆದುಕೊಂಡರೆ ಅವಳ ಪರಿಸ್ಥಿತಿ ಏನಾಗಬಹುದು. ಮರವಡುವಳು ಮರದ ಬೊಂಬೆಯ ಮಾಟದಲಿ – ಜೀವಭಾವವನ್ನು ಕಳೆದುಕೊಂಡ ಅವಳು ಮರದ ಬೊಂಬೆಯ ಹಾಗೆ ಬರಡಾಗುತ್ತಾಳೆ. ಹೆಣ್ಣಿನ ಕರ್ತವ್ಯಗಳನ್ನು ಹೇಳುವಂತೆಯೇ ಗಂಡಿನ ಕರ್ತವ್ಯವನ್ನು ಹೇಳಿದ ಕೃತಿ ಇದಾಗಿದೆ.

ಹೀಗಾಗಿ ಇದೊಂದು ಕೇವಲ ಪತಿವ್ರತಾ ಧರ್ಮವನ್ನು ಹೇಳುವ ಕೃತಿಯೆಂದು ನಾವು ಭಾವಿಸಬೇಕಿಲ್ಲ. ಪತಿಧರ್ಮವನ್ನು ಸಹ ಅಲ್ಲಲ್ಲಿ ಸಿಕ್ಕ ಅವಕಾಶಗಳಲ್ಲಿ ನಿರ್ದೇಶಿಸಿದ ಕೃತಿಯೆಂದೇ ನಾವು ಇದನ್ನು ಓದಿಕೊಳ್ಳಬೇಕಾಗುತ್ತದೆ.

■ **ಅಮೃತಮತಿ**

## ಮಾತೇ ಮುತ್ತು

- ಯಾವ ಸರ್ಕಾರಕ್ಕೆ ಜನರನ್ನು ಸುಖಿಗಳನ್ನಾಗಿಸಬೇಕೆಂಬ ಅಪೇಕ್ಷೆ ಇದೆಯೋ, ಯಾವ ಸರ್ಕಾರಕ್ಕೆ ಅದನ್ನು ಸಾಧಿಸುವ ರೀತಿ ತಿಳಿದಿದೆಯೋ ಅದೇ ಶ್ರೇಷ್ಠ ಸರ್ಕಾರ.
  —ಮೆಕಾಲೆ
- ಸತ್ಯದ ಜೊತೆ ಬದುಕುವವನು ಯಾರಿಗೂ ಹೆದರಬೇಕಾಗಿಲ್ಲ.
  —ಸಾಕ್ರೆಟಿಸ್
- ಯಾರು ಪ್ರೀತಿಸುತ್ತಾರೋ ಅವರಿಗೆ ಮಾತ್ರ ತಿದ್ದುವ, ಶಿಕ್ಷಿಸುವ ಅಧಿಕಾರ ಉಂಟು.
  —ರವೀಂದ್ರನಾಥ್ ಟ್ಯಾಗೋರ್
- ಸುಖ, ಸ್ನೇಹಿತರನ್ನು ಕರೆತರುತ್ತದೆ. ಕಷ್ಟ ಅವರ ಅರ್ಹತೆಯನ್ನು ಪರೀಕ್ಷಿಸುತ್ತದೆ.
  —ಪಿ. ಸೈರಸ್
- ಸದ್ಗುಣ ಮತ್ತು ದುರ್ಗುಣಗಳ ವ್ಯತ್ಯಾಸ ತಿಳಿಯದಾದಾಗ ನಮ್ಮ ಬೆಳವಣಿಗೆ ನಿಲ್ಲುತ್ತದೆ.
  —ಮಹಾತ್ಮ ಗಾಂಧಿ
- ಭಾಗ್ಯವಿರಬಹುದು, ಬೇಕಾದವರು ಇರಬಹುದು, ಫಲ ಮಾತ್ರ ಪಡೆದಷ್ಟೇ.
  —ಎ.ಆರ್. ಕೃಷ್ಣ ಶಾಸ್ತ್ರಿ
- ಹೊಗಳಿಕೆಯ ಮಾಲಿನ್ಯವನ್ನು ತೊಡೆದು ಹಾಕಲು ಏಕಮಾತ್ರ ಉಪಾಯ: ಕೆಲಸ ಮತ್ತು ಇನ್ನಷ್ಟು ಕೆಲಸ.
  —ಆಲ್ಬರ್ಟ್ ಐನ್‌ಸ್ಟೀನ್
- ಪ್ರತಿಯೊಬ್ಬರೂ ತಮ್ಮ ತಮ್ಮ ಧರ್ಮವನ್ನು ತಾವೇ ಕಂಡುಕೊಳ್ಳಬೇಕು. ಧರ್ಮದ ದಾರಿ ಒಂದಲ್ಲ, ಹಲವು.
  —ಕೆ.ಎಂ. ಮುನ್ಷಿ
- ವ್ಯಕ್ತಿತ್ವವೇ ಸಾಧನೆಯ ಹೊಸ ಯುಗದ ಬೀಜಮಂತ್ರ.
  —ರಂ.ಶ್ರೀ. ಮುಗಳಿ